ಮನಸ್ಸಿನಿಂದ ಹಾದು ಹೋಯಿತು. ಅನ್ವರ್ ಮಾತ್ರ ಈ ವಿಷಯಕ್ಕೆ ಸುತರಾಂ ಒಪ್ಪಲಿಲ್ಲ. ಬದಲಿಗೆ ಗಟ್ಟಿ ಧ್ವನಿಯಲ್ಲಿ ಅವಳ ಮಾತನ್ನು ತಿರಸ್ಕರಿಸಿ, ಮನೆ ಮಾತ್ರ ಮಾರಲು ಬಿಡುವುದಿಲ್ಲ ಎಂದು ಘೋಷಿಸಿದ.

ಸಾಲಿಹಾ ತನ್ನ ಒಡವೆಗಳನ್ನೆಲ್ಲ ಕರಗಿಸಿದಳು. ಹತ್ತಾರು ಕಡೆ ಸಾಲ ಮಾಡಿಕೊಂಡಳು. ಗಿರ ಗಿರನೆ ಸುತ್ತುತ್ತಾ ಇಬ್ಬರು ಹೆಣ್ಣು ಮಕ್ಕಳ ಜಹೇಝ್(ವರದಕ್ಷಿಣೆ)ಯನ್ನು ವ್ಯವಸ್ಥೆ ಮಾಡುವುದರಲ್ಲಿ ಅವಳು ತಲ್ಲೀನಳಾದಳು. ಜೊತೆ ಜೊತೆಯಲ್ಲಿ ಮೆಹೆಕ್ ಇಷ್ಟಿಷ್ಟೇ ಗುಣಮುಖವಾಗುತ್ತಿದ್ದಾಳೆ ಎಂದು ಅವಳಿಗೆ ಅನಿಸತೊಡಗಿತು. ಮೆಹೆಕ್ ಒಂದು ಕಿರುನಗೆ ಬೀರಿದರೆ ಸಾಕು, ಅವಳೆದೆಯಲ್ಲಿ ವಸಂತನ ಆಗಮನವಾಗುತ್ತಿತ್ತು. ತನ್ನ ಕೈಯಾರೆ ಒಂದೆರಡು ತುತ್ತು ಅನ್ನವನ್ನು ಅವಳು ತಿಂದ ದಿವಸ ಅವಳ ಹೃದಯ ಸಂಭ್ರಮದಿಂದ ಕುಣಿಯುತ್ತಿತ್ತು. ಒಂದು ದಿನ ಅವಳು ಒಂದು ಚೆಂದದ ನೆಕ್ಲೇಸನ್ನು ತಂದು ಮೆಹೆಕ್‌ನ ಎದುರಿಗೆ ಹಿಡಿದಳು. “ಮೆಹೆಕ್, ನನ್ನ ಮಗಳೆ ನೋಡು, ನಿನಗೆ ಎಂತಹ ಒಳ್ಳೆಯ ನೆಕ್ಲೇಸ್ ತಂದಿದ್ದೇನೆ. ತಗೋ ಮಗು, ಅದನ್ನು ನಿನ್ನ ಕೊರಳಿಗೆ ಹಾಕಿಕೋ” ಎಂದು ಅವಳನ್ನು ಉತ್ತೇಜಿಸಿದಳು. ಆ ನೆಕ್ಲೇಸನ್ನು ಕಂಡು ಮಹೆಕ್‌ಳ ಕಣ್ಣುಗಳು ಅರಳಿದವು. ಅವಳು ಎರಡೂ ಕೈಯಲ್ಲಿ ಅದನ್ನು ನಾಜೂಕಾಗಿ ಹಿಡಿದು ತನ್ನ ಕೊರಳಿನ ಗುಂಟ ಅರಳಿಸಿ ಅದರ ಹುಕ್ಕನ್ನು ಹಾಕಿಕೊಂಡಳು. ಹಾಗೆಯೇ ಒಂದು ಕ್ಷಣ ಅದರ ಮೇಲೆ ಕೈ ಇಟ್ಟವಳೇ ಅದರ ಹುಕ್ಕನ್ನು ಕೂಡ ತೆಗೆಯದೇ ಹಾಗೆಯೇ ಕುತ್ತಿಗೆಯಿಂದ ಅದನ್ನು ಕಿತ್ತು ಬಿಸಾಡಿದಳು. ಆ ನೆಕ್ಲೇಸ್ ಎರಡು ಮೂರು ತುಂಡಾಗಿ ನೆಲದ ಮೇಲೆ ಹರಡಿತು. ಸಾಲಿಹಾ ಬಿಕ್ಕಿ ಬಿಕ್ಕಿ ಅತ್ತಳು. ಯಾತಕ್ಕೆ ಅತ್ತಳೋ, ಮುರಿದು ಬಿದ್ದು ಚೆದುರಿದ

